## 7. ರೈತರ ಹಕ್ಕಿಗೆ ಮಸೂದೆ ಕೊಕ್ಕೆ

ಸುಗ್ರೀವಾಜ್ಞೆಗಳ ಬದಲಾಗಿ ಕೇಂದ್ರ ಸರ್ಕಾರ ಜಾರಿಗೆ ತರಲು ಉದ್ದೇಶಿಸಿರುವ ರೈತರಿಗೆ ಸಂಬಂಧಿಸಿದ ಮೂರು ಮಸೂದೆಗಳ ವಿಚಾರದಲ್ಲಿ ಸರ್ಕಾರ ಹಾಗೂ ಕಾಂಗ್ರೆಸ್ ನಡುವೆ ಲೋಕಸಭೆಯಲ್ಲಿ ಜಟಾಪಟಿ ನಡೆಯಿತು. ರೈತರನ್ನು  ಕ್ರೂರವಾಗಿ ಶೋಷಿಸಲು ಕಾರ್ಪೊರೇಟ್ ಸಂಸ್ಥೆಗಳಿಗೆ ಮಸೂದೆಗಳು ಮುಕ್ತ ಅವಕಾಶ ನೀಡುತ್ತವೆ ಎಂದು ಕಲಾಪದ ಮೊದಲ ದಿನ ಕಾಂಗ್ರೆಸ್ ಆರೋಪಿಸಿತು.

ಸರ್ಕಾರ ಮಂಡಿಸಿದ ಮೂರು ಮಸೂದೆಗಳು ರೈತರು ಹಾಗೂ ಕೃಷಿ ಕಾರ್ಮಿಕರ ಮೇಲೆ ಭೀಕರವಾಗಿ ದಾಳಿ ಎಸಗಲಿವೆ ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಆರೋಪಿಸಿದ್ದಾರೆ. ಕೇಂದ್ರ ಸರ್ಕಾರದ ಮೂರು ಕರಾಳ ಸುಗ್ರೀವಾಜ್ಞೆಗಳಿಂದಾಗಿ ರೈತರಿಗೆ ಕನಿಷ್ಠ  ಬೆಂಬಲ ಬೆಲೆ ಸಿಗುವುದಿಲ್ಲ. ಸುಗ್ರೀವಾಜ್ಞೆಯು ಪ್ರಧಾನಿಯ ಮತ್ತೊಂದು ರೈತವಿರೋಧಿ ಪಿತೂರಿ. ರೈತರ ಹಕ್ಕುಗಳ ಮೇಲೆ ದಾಳಿ ಎಂದು ಆರೋಪಿಸಿದ್ದಾರೆ.

ರೈತ ಉತ್ಪನ್ನ ವ್ಯಾಪಾರ ಮತ್ತು ವಾಣಿಜ್ಯ (ಉತ್ತೇಜನ ಮತ್ತು ನೆರವು) ಮಸೂದೆ, ಬೆಲೆ ಖಾತರಿ ಮತ್ತು ಬೇಸಾಯ ಸೇವೆಗಳ ಒಪ್ಪಂದ ( ಸಬಲೀಕರಣ ಮತ್ತು ಸಂರಕ್ಷಣೆ) ಮಸೂದೆ ಹಾಗೂ ಅಗತ್ಯ ಸರಕುಗಳ (ತಿದ್ದುಪತಿ) ಮಸೂದೆಯನ್ನು ಮಂಡಿಸಲಾಯಿತು.

ರೈತರು ಹಾಗೂ ಕೃಷಿ ಕ್ಷೇತ್ರವನ್ನು ನಾಶಮಾಡಲು ಸರ್ಕಾರ ಮಸೂದೆಗಳನ್ನು ಪರಿಚಯಿಸಿದೆ ಎಂದು ಲೋಕಸಭೆಯಲ್ಲಿ ಕಾಂಗ್ರೆಸ್‌ನ ಉಪನಾಯಕ ಗೌರವ್ ಗೊಗೊಯಿ ಆರೋಪಿಸಿದ್ದು, ಮಂಡಿಸಲಾದ ಮಸೂದೆಗಳು ರೈತರಿಗೆ ಸಹಾಯ ಮಾಡುವುದಿಲ್ಲ. ಆದರೆ ಉದ್ಯಮ ವಲಯ ಮತ್ತು ದೊಡ್ಡ  ಬಂಡವಾಳ ಶಾಹಿಗಳಿಗೆ ಸಹಾಯ ಮಾಡುತ್ತವೆ. ಬಹುಶ: ಈ ದಿನಗಳು ರೈತರ ಪಾಲಿಗೆ ಕಪ್ಪು ಅಕ್ಷರದಲ್ಲಿ ಬರೆಯಬೇಕಾದ ದಿನಗಳು. ರೈತರು ಸಂಕಷ್ಟದಲ್ಲಿದ್ದಾರೆ. ಉತ್ಪನ್ನಗಳಿಗೆ ಸೂಕ್ತ ಬೆಲೆ ಪಡೆಯಲು ಸಾಧ್ಯವಾಗುತ್ತಿಲ್ಲ. ಹೊಲದಲ್ಲಿ ಕೆಲಸ ಮಾಡುತ್ತಿರುವವರಿಗೆ ದಿನಗೂಲಿ ನೀಡಲು ಅವರಿಂದ ಆಗುತ್ತಿಲ್ಲ ಎಂದು ಗೊಗೊಯಿ  ಹೇಳಿದ್ದಾರೆ.

ಆಧಾರ:ಪ್ರಜಾವಾಣಿ, ದಿನಾಂಕ:15.09.2020